**E-ISSN:** 2583-9667
**Indexed Journal**
**Peer Reviewed Journal**
https://multiresearchjournal.theviews.in

**Received: 15-05-2025**
**Accepted: 20-06-2025**
**Published: 24-07-2025**

**INTERNATIONAL JOURNAL OF ADVANCE RESEARCH IN MULTIDISCIPLINARY**

**Volume 3; Issue 3; 2025; Page No. 302-304**

# ಕವಿ ರನ್ನ ಚಿತ್ರಿಸಿದ ದುರ್ಯೋಧನನ ಪಾತ್ರ

## ಡಾ. ಮಂಜುನಾಥ ಎಂಎಂ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಪೂಜಿ ನಗರ, ಶಿವಮೊಗ್ಗ, ಕರ್ನಾಟಕ, ಭಾರತ

**DOI:** https://doi.org/10.5281/zenodo.17991575

**Corresponding Author:** ಡಾ. ಮಂಜುನಾಥ ಎಂಎಂ

**Abstract**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೆಯ ಶತಮಾನವು ರಾಜಕೀಯವಾಗಿ ಕ್ಷಾತ್ರಯುಗವಾಗಿದ್ದರೂ ಸಾಹಿತ್ಯದ ದೃಷ್ಟಿಯಿಂದ ಸ್ವರ್ಣಯುಗವೆಂದು ಪರಿಗಣಿಸಲ್ಪಟ್ಟಿದೆ. ಈ ಯುಗದಲ್ಲಿ ಪಂಪ, ಪೊನ್ನ, ರನ್ನ ಎಂಬ ಮಹಾಕವಿಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅವರಲ್ಲಿ ಕವಿ ರನ್ನನು ರಚಿತವಾದ ಸಾಹಸ ಭೀಮ ವಿಜಯ ಅಥವಾ ಗದಾಯುದ್ಧ ಕೃತಿ ಕನ್ನಡ ಮಹಾಕಾವ್ಯ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಮಹಾಭಾರತದ ಕೊನೆಯ ಅರ್ಧ ದಿನದ ಭೀಮ–ದುರ್ಯೋಧನರ ಗದಾಯುದ್ಧವನ್ನು ಆಧಾರವಾಗಿಟ್ಟುಕೊಂಡ ಈ ಚಂಪೂಕಾವ್ಯದಲ್ಲಿ ರನ್ನನು ವೀರ, ರೌದ್ರ ಮತ್ತು ಕರುಣ ರಸಗಳ ಸಮನ್ವಯವನ್ನು ಅಪೂರ್ವವಾಗಿ ನಿರ್ವಹಿಸಿದ್ದಾನೆ. ವಿಶೇಷವಾಗಿ ದುರ್ಯೋಧನನ ಪಾತ್ರಚಿತ್ರಣದಲ್ಲಿ ರನ್ನನು ಅವನ ವೀರತ್ವ, ಛಲ, ಅಭಿಮಾನ, ಪಿತೃಭಕ್ತಿ, ಸ್ನೇಹ, ಪುತ್ರವಾತ್ಸಲ್ಯ ಹಾಗೂ ಆಂತರಿಕ ದ್ವಂದ್ವಗಳನ್ನು ಸೂಕ್ಷ್ಮ ಮನೋವೈಜ್ಞಾನಿಕ ದೃಷ್ಟಿಯಿಂದ ಚಿತ್ರಿಸಿದ್ದಾನೆ. ಇದರಿಂದ ದುರ್ಯೋಧನನು ಕೇವಲ ದುಷ್ಟನಾಗಿ ಮಾತ್ರವಲ್ಲ, ಮಾನವೀಯ ಮೌಲ್ಯಗಳನ್ನು ಹೊಂದಿದ ದುರಂತ ನಾಯಕನಾಗಿ ರೂಪುಗೊಂಡಿದ್ದಾನೆ. ಈ ಲೇಖನವು ಗದಾಯುದ್ಧ ಕಾವ್ಯದಲ್ಲಿ ರನ್ನನ ಪಾತ್ರಸೃಷ್ಟಿ, ರಸಪ್ರತಿಪಾದನೆ, ನಾಟಕೀಯತೆ ಹಾಗೂ ಪ್ರತಿನಾಯಕನಾದ ದುರ್ಯೋಧನನ ವ್ಯಕ್ತಿತ್ವದ ಬಹುಮುಖ ಚಿತ್ರಣವನ್ನು ವಿಶ್ಲೇಷಿಸಿ, ರನ್ನನನ್ನು ಶಕ್ತಿಕವಿ, ಗಂಡುಕವಿ ಮತ್ತು ಮನಃಶಾಸ್ತ್ರಜ್ಞನಾಗಿ ಗುರುತಿಸುತ್ತದೆ.

**Keywords:** ರನ್ನ, ಗದಾಯುದ್ಧ, ಸಾಹಸ ಭೀಮ ವಿಜಯ, ದುರ್ಯೋಧನ ಪಾತ್ರಚಿತ್ರಣ, ಕ್ಷಾತ್ರಯುಗ, ಕನ್ನಡ ಮಹಾಕಾವ್ಯ, ವೀರರಸ, ಪ್ರತಿನಾಯಕ, ರಸಪ್ರತಿಪಾದನೆ, ಹತ್ತನೆಯ ಶತಮಾನ

## Introduction

ಕನ್ನಡ ನಾಡಿನ ಚರಿತ್ರೆಯಲ್ಲಿ ಹತ್ತನೆಯ ಶತಮಾನವು ಕ್ಷಾತ್ರಯುಗವಾದರೆ, ಸಾಹಿತ್ಯ ಚರಿತ್ರೆಯಲ್ಲಿ ಸ್ವರ್ಣಯುಗ ವೆಂದು ವಿದ್ವಾಂಸರು ಪರಿಗಣಿಸಿದ್ದಾರೆ. ಈ ಶತಮಾನದಲ್ಲಿ ಕರ್ನಾಟಕದ ಅರಸರಲ್ಲಿ ಕ್ಷಾತ್ರತೇಜಸ್ಸು ಉಜ್ವಲವಾಗಿದ್ದರೂ ಇಮ್ಮಡಿ ತೈಲಪನು ಚಾಲುಕ್ಯ ಸಾಮ್ರಾಜ್ಯವನ್ನು ವಿಸ್ತರಿಸಿ,ಸಾಮಂತ ರಾಜರನ್ನೆಲ್ಲ ಹತೋಟಿಗೆ ತಂದು,ಮಾಳವರನ್ನು ಗೆದ್ದು,ಚೋಳರನ್ನು ಸೋಲಿಸಿ, ಘೂರ್ಜರನ್ನು ನೆಲಸಮ ಮಾಡಿ,ತನ್ನ ಪ್ರಭಾವವನ್ನು ಮೆರೆಸಿದ್ದನು. ಯುದ್ಧಗಳಿಂದಲೂ,ವೀರ ಜೀವನದಿಂದಲೂ ಕೂಡಿದ ಕರ್ನಾಟಕದ ಜನ ಜೀವನ ಆಗಿನ ಕಾಲದ ಸಾಹಿತ್ಯ ಕೃತಿಗಳಲ್ಲಿ ಸಹಜವಾಗಿ ಪ್ರತಿಬಿಂಬಿಸಿತು.ಕನ್ನಡದ ಆದಿ ಕವಿ ಎಂದು ಪ್ರಸಿದ್ಧನಾದ ಪಂಪ,ಕವಿಚಕ್ರವರ್ತಿಗಳಲ್ಲಿ ಮೊದಲಿಗನಾದ ಪೊನ್ನ,ಎರಡನೆಯವನಾದ ರನ್ನ ಈ ಮಹಾ ಕವಿಗಳೆಲ್ಲ ತಮ್ಮ ಲೌಕಿಕ ಕಾವ್ಯಗಳಲ್ಲಿ ಕ್ಷಾತ್ರಧರ್ಮ ದರ್ಶನವನ್ನು,ಆಗಮಿಕ ಕಾವ್ಯಗಳಲ್ಲಿ ಧರ್ಮದರ್ಶನವನ್ನು ಪ್ರತಿಫಲಿಸಿದರು.ಇವರ ಕೃತಿಗಳಿಂದ ಆಗಿನ ಕಾಲದ ಜನತೆಯ ಸಾಹಸ ಜೀವನ,ಜೀವನ ಉದ್ದೇಶ, ಆಚಾರ-ವಿಚಾರ,ಸಂಸ್ಕೃತಿ ಮೊದಲಾದ ವಿಶೇಷತೆಗಳನ್ನು ಗುರುತಿಸಬಹುದು.

ಈ ಕ್ಷಾತ್ರ ಯುಗದಲ್ಲಿ ಕವಿ ರನ್ನ ಸೌಮ್ಯ ಸಂವತ್ಸರದಲ್ಲಿ ಕ್ರಿ.ಶ 949 ರಲ್ಲಿ ಬೆಳುಗಲಿ ನಾಡಿನ ಜಮಖಂಡಿ ಎಪ್ಪತ್ತರ ಶ್ರೇಷ್ಠವಾದ ಮುದುವೊಳಲಿನಲ್ಲಿ ಬಳೆಗಾರ ಕುಲದಲ್ಲಿ ಜನಿಸಿದನು.ಇವನ ತಂದೆ ಜಿನವಲ್ಲಭೇಂದ್ರ,ತಾಯಿ ಅಬ್ಬಲಬ್ಬೆ.ಗುರುಗಳು ಅಜಿತಸೇನಾಚಾರ್ಯರು,ಶಾಂತಿ ಮತ್ತು ಜಕ್ಕಿ ಪತ್ನಿಯರು.ದೃಢಬಾಹು, ರೇಚಣ ಮತ್ತು ಮಾರಮಯ್ಯ ಸಹೋದರರು.ಚಾವುಂಡರಾಯ ಮತ್ತು ದಾನಚಿಂತಾಮಣಿ ಅತ್ತಿಮಬ್ಬೆಯರು ಪೋಷಕರು.ರಾಯ ಮತ್ತುಅತ್ತಿಮಬ್ಬೆ ಮಕ್ಕಳು.

ಚಾಲುಕ್ಯ ಚಕ್ರವರ್ತಿ ಇಮ್ಮಡಿ ತೈಲಪ ಹಾಗೂ ಆತನ ಮಗ ಸತ್ಯಾಶ್ರಯ ಇರಿವಬೆಡಂಗ ಆಶ್ರಯ ನೀಡಿದ ಅರಸರು.

ರತ್ನತ್ರಯರಲ್ಲಿ ಮೂರನೆಯವನಾದ ರನ್ನ ನಿಂದ ರಚಿತವಾದ ಕೃತಿಗಳು ನಾಲ್ಕು.ಪರಶುರಾಮ ಚರಿತೆ,ಚಕ್ರೇಶ್ವರ ಚರಿತೆ,ಸಾಹಸ ಭೀಮ ವಿಜಯ(ಗದಾಯುದ್ಧ) ಮತ್ತು ಅಜಿತನಾಥ ಪುರಾಣ.ಇವುಗಳಲ್ಲಿ. ಮೊದಲ ಎರಡು ಕೃತಿಗಳು ಇನ್ನೂ ಲಭ್ಯವಾಗಿಲ್ಲ.

ರನ್ನಕಂದವೆಂಬ ಪುಟ್ಟ ನಿಘಂಟನ್ನು ರನ್ನನು ಬರೆದನೆಂದು ಹೇಳಿದ್ದರೂ ಕೂಡ ಅದರ ಸಮಗ್ರಪ್ರತಿ ಇನ್ನೂ ದೊರೆತಿಲ್ಲ.

ಸಾಹಸ ವಿಜಯ ಅಥವಾ ಗದಾಯುದ್ಧ ಕ್ರಿ. ಶ.978 ರಲ್ಲಿ ರಚನೆಯಾದ ಕೃತಿ.ಆಶ್ರಯದಾತ ಅರಸ ಇಮ್ಮಡಿ ತೈಲಪನನ್ನು ಮಹಾಭಾರತದ ಭೀಮನೊಂದಿಗೆ ಸಮೀಕರಿಸಿ ಬರೆದ ಕೃತಿ.ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರನ್ನನ ಹೆಸರನ್ನು ಚಿರಸ್ಥಾಯಿಯಾಗುವಂತೆ ಮಾಡಿದ್ದು ಕೂಡ ಇದೇ ಕೃತಿ ಎಂಬುದು ವಿಶೇಷ, ಇದು ಹತ್ತು ಆಶ್ವಾಸಗಳನ್ನುಳ್ಳ ಚಂಪೂ ಕಾವ್ಯ.

ಹದಿನೆಂಟು ದಿನಗಳ ಮಹಾಭಾರತ ಯುದ್ಧದಲ್ಲಿ ಕೊನೆಯ ಅರ್ಧ ದಿನದ ಭೀಮ ದುರ್ಯೋಧನರ ಗದಾಯುದ್ಧವೇ ಇದರ ಕಥಾವಸ್ತು.ರನ್ನನು ತನ್ನ ಕೃತಿ ರತ್ನವಾದ ಗದಾಯುದ್ಧಕ್ಕೆ ಪಂಪ ಭಾರತದ ಹದಿಮೂರನೆಯ ಆಶ್ವಾಸದಿಂದ ವಸ್ತುವನ್ನು ಆಯ್ದು ಕಥೆ,ಪಾತ್ರ,ಸನ್ನಿವೇಶ ನಿರ್ವಹಣೆಯಲ್ಲಿ ಪಂಪನ ಮಾರ್ಗವನ್ನು ಅನುಸರಿಸಿದ್ದಾನೆ ಹಾಗೆಯೇ ಭಾಸನ ಊರುಭಂಗ, ಭಟ್ಟ ನಾರಾಯಣನ ವೇಣಿಸಂಹಾರ ನಾಟಕಗಳಿಂದ ಪ್ರಭಾವಿತನಾಗಿದ್ದಾನೆ. ಹೀಗಿದ್ದರೂ ರನ್ನನ ಮಹಾಶಕ್ತಿಯನ್ನು ಅಲ್ಲಗಳೆಯುವಂತಿಲ್ಲ.ಕಾವ್ಯದ ಆರಂಭದಲ್ಲಿ ಬರುವ ಭೀಮ..ದ್ರೌಪದಿಯರ ಮಾತು ಕಥೆ,ಭೀಮನ ಭೀಷಣ ಪ್ರತಿಜ್ಞೆ,ದುರ್ಯೋಧನನ ರಣರಂಗ ಸಂಚಾರ, ದ್ರೋಣ-ಅಶ್ವತ್ಥಾಮರ ತಿರಸ್ಕಾರ,ಪಾಂಡವರ ಅವಹೇಳನ,ಸಂಜಯನಿಂದ ಪಾಂಡವರ ಪ್ರಶಂಸೆ,ಕರ್ಣ, ದುಶ್ಯಾಸನ, ಮಗ ಲಕ್ಷಣಕುಮಾರರ. ಕುರಿತ ದುಃಖ,ಶತ್ರು ಪುತ್ರನಾದ ಅಭಿಮನ್ಯುವಿನ ಪ್ರಶಂಸೆ, ಮೊದಲಾದ ಸನ್ನಿವೇಶಗಳನ್ನು ಸೃಷ್ಟಿಸಿ ರನ್ನನು ತನ್ನ ಕಾವ್ಯವನ್ನು ಪ್ರಕಾಶಗೊಳಿಸಿದ್ದಾನೆ.

ರನ್ನನ ಪಾತ್ರ ಸೃಷ್ಟಿಕ್ರಮ, ನಾಟಕೀಯ ಪ್ರಜ್ಞೆ, ರಸಪ್ರತಿಪಾದನಾ ವಿಧಾನ ಮತ್ತು ರಸಾನುಗುಣವಾದ ಅದ್ವಿತೀಯ ಶೈಲಿ - ಇವು ಸಮರಸವಾಗಿ ಮೇಳೈಸಿ ಗದಾಯುದ್ಧ ಉಜ್ವಲ ಕೃತಿಯಾಗಿ ಸಹೃದಯರ ಮೆಚ್ಚುಗೆಗೆ ಪಾತ್ರವಾಗಿದೆ.

ಭೀಮ- ದುಯೋಧನರ ಪಾತ್ರ ಚಿತ್ರಣದಲ್ಲಿ ಕವಿ ರನ್ನ ಸೂಕ್ಷ ಕಲಾಪ್ರೌಢಿಮೆಯನ್ನು ಪ್ರದರ್ಶಿಸಿ ವೀರ, ಕರುಣ, ರೌದ್ರರಸ ಪ್ರವಾಹಗಳ ತ್ರಿವೇಣಿ ಸಂಗಮವನ್ನು ಸತ್ವಯುತವಾಗಿ, ಶಕ್ತಿ ಪೂರ್ಣವಾಗಿ ಮಾಡಿದ್ದಾನೆ. ಇದರಿಂದಾಗಿಯೇ ರಾಷ್ಟ್ರಕವಿ ಕುವೆಂಪುರವರು ರನ್ನನನ್ನು ಶಕ್ತಿ ಕವಿ ಎಂದು ಕರೆದರೆ, ಕನ್ನಡದ ಕಣ್ವ ಬಿ.ಎಂ ಶ್ರೀಕಂಠಯ್ಯನವರು ಗಂಡುಕವಿ ಎಂದು ಕರೆದಿದ್ದಾರೆ.

**ದುರ್ಯೋಧನನ ಪಾತ್ರಚಿತ್ರಣ:** ರನ್ನನು ದುರ್ಯೋಧನನ್ನು ಮಹಾನುಭಾವ. ಅಭಿಮಾನ ಧನ, ಸಾಹಸ ಗರ್ವಾಲಂಕೃತ, ಕುರುಕುಲಾರ್ಕ ಎಂಬಿತ್ಯಾದಿ ವಿಶೇಷಣಗಳಿಂದ ವಿವಿಧ ಸನ್ನಿವೇಶಗಳಲ್ಲಿ ಕರೆದಿದ್ದಾನೆ. ದುರ್ಯೋಧನನ ಪಾತ್ರಚಿತ್ರಣದಲ್ಲಿ ಕವಿ ಪ್ರತಿಭೆಯ ಕೌಶಲ ದಿವ್ಯಭವ್ಯ. ಇಲ್ಲಿ ಆತನ ವಿಭವವಿಲಾಸಗಳು, ಉದ್ದಾತಾ ಹಂಕಾರಗಳು ಗತಕಾಲದ ವೈಭ್ಯಗಳು.

ಗದಾಯುದ್ಧದಲ್ಲಿ ಪ್ರವೇಶಿಸುವ ದುರ್ಯೋಧನನು ತನ್ನ ಸರ್ವಸ್ವವನ್ನು, ತನ್ನವರನ್ನು ಕಳಕೊಂಡು ಏಕಾಕಿಯಾಗಿ ಚಿಂತಾಕ್ರಾಂತನಾಗಿದ್ದು ಓದುಗರ ಕರುಣೆ ಸಹಾನುಭೂತಿಗಳಿಗೆ ಪಾತ್ರನಾಗುತ್ತಾನೆ. ಇಂಥ ಹೀನಸ್ಥಿತಿಯಲ್ಲಿದ್ದರೂ ಅವನ ಧೀರ ನಿರ್ಣಯಗಳು ಉಗ್ರ ಸಾಧನೆಗಳು ಅಸಮ ಸಾಹಸಗಳು ಉಜ್ವಲವಾಗಿದ್ದು ಕವಿ ಸಹೃದಯರಲ್ಲಿ ವಿಶಿಷ್ಟ ಭಾವನೆಗಳನ್ನು ಉದ್ದೀಪನಗೊಳಿಸುತ್ತವೆ. ದುರ್ಯೋಧನ ದುಷ್ಟ, ಪಾಪಿ ಎಂಬ ಭಾವನೆ ಮಾಸಿ ಹೋಗುತ್ತದೆ ರನ್ನನ ಕಾವ್ಯ ದರ್ಪಣದಲ್ಲಿ ಪ್ರತಿಬಿಂಬಿತನಾದ ದುರ್ಯೋಧನ ಎಂಥವನು? ಪಾಂಡವರ ಅದರಲ್ಲೂ ಭೀಮನ ಮೇಲಣ ಹಗೆತನವನ್ನು ಬಿಟ್ಟರೆ ದುರ್ಯೋಧನನು ರನ್ನನೇ! ಅವನ ಗುರುಭಕ್ತಿ, ಪಿತೃಭಕ್ತಿ, ಮಿತ್ರಸ್ನೇಹ, ಸೋದರ ಪ್ರೇಮ, ಪುತ್ರವಾತ್ಸಲ್ಯ, ಪರರ ಪೌರುಷವನ್ನು ಕೊಂಡಾಡುವ ಗುಣ ಶತ್ರುಗಳಿಗೆ ಮಣಿಯದ ಚಾರಿತ್ರ್ಯ, ಉಗ್ರ ತೇಜ, ಅವಿಚಲ ಛಲ - ಇವನ್ನೆಲ್ಲ ರನ್ನನಂತೆ ನಿಚ್ಚಳವಾಗಿ ಚಿತ್ರಿಸಿದ ಕನ್ನಡ ಕವಿಗಳು ಮತ್ತೊಬ್ಬರಲ್ಲ. ಆದರೆ ಇದು ದುರ್ಯೋಧನನ ಒಂದು ಮುಖ ಮಾತ್ರವೆಂಬುದನ್ನು ಮರೆಯಬಾರದು. ಅವನ ಮರೆಯಾದ ಮತ್ತೊಂದು ಮುಖವನ್ನು ಅಂದರೆ ದುರ್ಗುಣಗಳನ್ನು, ಅನ್ಯಾಯಗಳನ್ನು ಎತ್ತಿ ತೋರುವಲ್ಲಿಯೂ ರನ್ನ ಹಿಂದುಳಿದಿಲ್ಲ. ದುರ್ಯೋಧನ ದುರ್ದೈವಿ. ಆದರೂ ಧೃತಿಗೆಟ್ಟವನಲ್ಲ. ಕೈಲಾದಷ್ಟು ಪುರುಷ ಪ್ರಯತ್ನ ಮಾಡಬೇಕೆನ್ನುವ ಮನೋ ನಿರ್ಧಾರವುಳ್ಳವನು. ಹಾಗೆ ಮಾಡಿ ದೈವಹತವಾಗಿ ಗತಾಸು ವಾದವನು. ಇದರಿಂದ ದ್ರೌಪದೀದ್ರೋಹನನ್ನು, ದುಶ್ಯಾಸನ ದುಷ್ಟ ಜೇಷ್ಟನನ್ನು ಕವಿ ಉದಾತ್ತೀಕರಿಸಿದ್ದಾನೆ. ಮಹಾನುಭಾವನನ್ನಾಗಿ ಪರಿವರ್ತಿಸಿದ್ದಾನೆ ಎಂಬ ವಿಮರ್ಶಕರ ಅಭಿಪ್ರಾಯವನ್ನು ಅಂಗೀಕರಿಸಲು ಸಾಧ್ಯವಿಲ್ಲ. ಕಾರಣ ದುರ್ಯೋಧನನಲ್ಲಿ ಮೂಡುವ ಪಶ್ಚಾತ್ತಾಪ, ಪಾಪಪ್ರಜ್ಞೆ, ಕಳಕಳಿಗಳೆಲ್ಲ ಕ್ಷಣಿಕವಾದುವು. ಅವನ ಪಾತ್ರದಲ್ಲಿ ಮಾತಿಗೂ ಕೃತಿಗೂ ಯಾವ ಹೊಂದಾಣಿಕೆಯೂ ಇಲ್ಲ. ಅವನು ವೀರ, ಅಭಿಮಾನಿ, ತೇಜಸ್ವಿ, ಚಲದಂಕಮಲ್ಲ ಆದರೆ ಅವಿವೇಕಿ.

ದುಶ್ಚಲ, ದುಷ್ಟ ವೃತ್ತಿ, ದುರ್ನಡತೆಗಳೇ ಆತನ ಮತ್ತು ಕುರುವಂಶದ ಅದೋಗತಿಗೆ ಕಾರಣಗಳಾದುವು. ಎಲ್ಲ ಸ್ವಯಂಕೃತಾನರ್ಥಗಳೇ ಎಂಬುದನ್ನು ಕವಿ ರನ್ನನು ಸುಷ್ಟಪಡಿಸಿದ್ದಾನೆ.

ರನ್ನಕವಿಯ ಪ್ರತಿಭೆಯ ವಿಶ್ವರೂಪ ದರ್ಶನದ ಅರಿವಾಗುವುದು ಗದಾಯುದ್ಧದಲ್ಲಿ. ಶೇಕ್ಸ್ ಪಿಯರ್ ಮಹಾಕವಿಗೆ ನಾಟಕವನ್ನು ರಚಿಸಲು ಕರವಸ್ತ್ರವೊಂದು ಸಾಕಾದರೆ ಮಹಾಕವಿ ರನ್ನನ ಮಹಾಕಾವ್ಯ ನಿರ್ಮಾಣಕ್ಕೆ ಗದಾಯುದ್ಧವೇ ಸಾಕು. ಕೆಲವೇ ಗಂಟೆಗಳಲ್ಲಿ ನಡೆದ ಈ ಘಟನೆಯನ್ನಾಧರಿಸಿ ನಾಟ್ಯ ಪ್ರಭೆಯುಳ್ಳ ಮೇರುಕೃತಿಯನ್ನು ನಿರ್ಮಿಸಿದ ರನ್ನನ ವಿರಾಟ್ ಪ್ರತಿಭೆ ಅದ್ಭುತವಾದುದಾಗಿದೆ. ಭೀಮ ದುರ್ಯೋಧನರ ಬದ್ಧ ಮತ್ಸರ ಬೀಜವೇ ಮಹಾವೃಕ್ಷವಾಗಿ ಬೆಳೆದು ವಿಷ ಫಲವನ್ನಿತ್ತಿತು. ಅಂದರೆ ಕುರುವಂಶ ನಿರ್ನಾಮವಾಯಿತು. ಭೀಮ ಗೆದ್ದು ಸೋತರೆ, ದುರ್ಯೋಧ ಸೋತು ಗೆದ್ದ. ಭೀಮನನ್ನು ಇಳಿಸಿಲ್ಲ, ಆದರೆ ಕೌರವನನ್ನು ಏರಿಸಿರುವನು. ದುರ್ಯೋಧನನು ಛಲವನ್ನು, ಪೌರುಷವನ್ನು ಅಪ್ಪಿಕೊಂಡವನು. ಭೀಮನು ಭೀಮ ಬಲಸಂಪನ್ನನು. ದುರ್ಯೋಧನನನು ತನ್ನ ಛಲವನ್ನು ಕೊನೆಯವರೆಗೂ ಸಾಧಿಸಿದ. ದುರ್ಯೋಧನ ಗಾಂಧಾರಿಯ ಮತ್ಸರ ಗರ್ಭದಿಂದ ಹೊರಬಂದವರಲ್ಲಿ ಮೊದಲಿಗನು. ಇವನ ಛಲ - ಮತ್ಸರಗಳು ರಕ್ತಗತವಾಗಿ ಬಂದವುಗಳು. ಈ ಗುಣಗಳನ್ನು

ಅಲ್ಲಗಳೆಯುವಂತಿಲ್ಲ.

ತನ್ನ ಪ್ರತಿಭಾಶಕ್ತಿಯಿಂದ ಭಾರತ ವೀರರಿಬ್ಬರ ನೈಜ ಗುಣ ಸ್ವಭಾವಗಳನ್ನು ಕಂಡ ರನ್ನನು ಅವುಗಳನ್ನು ಯಥಾವತ್ತಾಗಿ ಕಾವ್ಯದಲ್ಲಿ ಚಿತ್ರಿಸಿದ್ದಾನೆ. ಹಾಗೆ ಚಿತ್ರಿಸುವಾಗ ಅವರಿಬ್ಬರ ಮಾನಸಿಕ ಹೊಯ್ದಾಟಗಳನ್ನು ಎಳೆಎಳೆಯಾಗಿ ವಿಶ್ಲೇಷಿಸಿ ಭೀಮನ ಏಕಮುಖ ವ್ಯಕ್ತಿತ್ವ,ದುರ್ಯೋಧನನ ದ್ವಿಮುಖ ವ್ಯಕ್ತಿತ್ವಗಳನ್ನು ಮುಚ್ಚಿ ಹೇಳಿದೆ ಬಿಚ್ಚಿ ತೋರಿಸಿರುವನು. ಹೀಗೆ ರನ್ನನು ಗಂಡುಗಲಿಯಾಗಿ ಮಹಾಕವಿಯಾಗಿ, ಮನಃಶಾಸ್ತ್ರಜ್ಞನಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಗುರುತಿಸಿಕೊಂಡಿದ್ದಾನೆ.

ಅಭಿಮನ್ಯುವಿನ ಮೃತ ದೇಹವನ್ನು ಕಂಡು....
ಗುರುಪಣ್ಣಿದ ಚಕ್ರವ್ಯೂ
ಹರಚನೆ ಪೆರರ್ಗ ರಿದು ಪುಗಲಿದಂ ಪೊಕ್ಕು ರಣಾ
ಜಿರದೊಳರಿ ನೃಪರನಿಕ್ಕಿದ
ನರಸುತ ನಿನ್ನೊರೆಗೆ ದೊರೆಗೆ ಗಂಡರುಮೊಳರೇ....

ಎನ್ನುವಲ್ಲಿ ದುರ್ಯೋಧನ ತನ್ನ ಶತ್ರು ಪುತ್ರನಾದ ಅಭಿಮನ್ಯುವಿನ ಸಾಹಸವನ್ನು ಕೊಂಡಾಡುವುದು ಗುಣಕ್ಕೆ ಮತ್ಸರವಿಲ್ಲ ಎಂಬ ಮಾತನ್ನು ನೆನಪಿಸುತ್ತದೆ. ಅಭಿಮನ್ಯುವಿಗೆ ಸರಿಸಾಟಿಯಾಗಿ ನಿಲ್ಲುವಂತ ವೀರರು ಯಾರಿದ್ದಾರೆ ಎಂಬುದು ದುರ್ಯೋಧನನ ಪ್ರಶ್ನೆ.

ಹಾಗೆಯೇ ಮಗನ ಶವವನ್ನು ನೋಡಿದಾಗ..
ಗಳಿತ ಶರಮಾಯ್ತು ಹಸ್ತಂ
ಗಳಿತ ರಣೋತ್ಸಾಹ ಮಾಯ್ತು ಹೃದಯಂ ನಯನಂ
ಗಳಿತಾಶ್ರುವಾಯ್ತು ಕೌರವ
ಕುಲ ತಿಲಕಂಗಾ ಕುಮಾರನಂ ಕಾಣಲೊಡಂ.......

ದುರ್ಯೋಧನ ವೀರ ಕಲಿಯೇ ಆಗಿದ್ದರೂ ಕೂಡ ಮಗನ ಸಾವು ಅವನನ್ನು ಕಂಗೆಡಿಸಿಬಿಡುತ್ತದೆ. ಕೈಯಿಂದ ಬಾಣ, ಹೃದಯದಿಂದ ಯುದ್ಧೋತ್ಸಾಹ, ಕಣ್ಣಿಂದ ಕಂಬನಿ ಉಕ್ಕಿಬರುತ್ತದೆ. ಮಗ ತಂದೆಗೆ ತರ್ಪಣೋದಕವನ್ನ ಕೊಡುವುದು ರೂಢಿ ಆದರೆ ಇಲ್ಲಿ ತಂದೆಯೇ ಮಗನಿಗೆ ತರ್ಪಣ ಬಿಡುವಂತಾಯಿತಲ್ಲ ಎಂದು ವ್ಯಥೆ ಪಡುತ್ತಾನೆ.

ಸಹೋದರ ದುಶ್ಯಾಸನನ ಕಳೆಬರವನ್ನು ಕಂಡು, ತಾಯಿಯ ಎದೆಹಾಲು, ಸೋಮರಸ - ಸುಖ ಭೋಜನ ಸವಿಯುತ್ತಿದ್ದುದು ದುರ್ಯೋಧನ. ಆದರೆ ಸಾವಿನಲ್ಲಿ ಮಾತ್ರ ಕ್ರಮ ವ್ಯತ್ಯಾಸವಾಯಿತೆಂದು ಭ್ರಾತೃವಾತ್ಸಲ್ಯದಿಂದ ಆಲಾಪಿಸುತ್ತಾನೆ. ಕರ್ಣನ ಶವವನ್ನು ಕಂಡು,ನೀನಿಲ್ಲದೆ ನಾನು ರಾಜ್ಯಭಾರ ಮಾಡುವೆನೆ? ನಿನ್ನನ್ನು ಬಿಟ್ಟು ನಾನು ಬಾಳುವ ಯೋಚನೆ ಮಾಡುವೆನೆ? ನೀನಿಲ್ಲದೆ ಶತ್ರುಗಳೊಂದಿಗೆ ಸಂಧಾನ ಮಾಡಿ ಒಂದುಗೂಡಿ ಬಾಳುವೆನೇ? ಖಂಡಿತಾ ಇಲ್ಲ ಎಂಬುದು ದುರ್ಯೋಧನ ಸ್ನೇಹಕ್ಕೆ ಕೊಡುವ ಬೆಲೆ. ಹಾಗೆಯೇ ಶರಶಯ್ಯೆಯಲ್ಲಿದ್ದ ಭೀಷ್ಮರು ಇನ್ನಾದರೂ ಪಾಂಡವರೊಂದಿಗೆ ಸಂಧಾನ ಮಾಡಿಕೋ ಎಂದಾಗ,

ನೆಲಕಿರಿವೆನೆಂದು ಬಗೆವಿರೆ
ಛಲಕಿರಿವೆಂ ಪಾಂಡುಸುತರೊಳೀನೆಲನಿದು ಪಾ
ಳ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ವಪೆನೆ....

ಎನ್ನುವಲ್ಲಿ ದುರ್ಯೋಧ ತನ್ನವರನ್ನೆಲ್ಲ ಕಳೆದುಕೊಂಡು ಒಬ್ಬಂಟಿಯಾಗಿದ್ದರೂ ಕೂಡ ಅವನ ಸ್ವಾಭಿಮಾನ ಮತ್ತು ಛಲಕ್ಕೆ ಯಾವುದೇ ಕಳಂಕವಿಲ್ಲ

ಹೀಗೆ ರನ್ನ ದುರ್ಯೋಧನನ ಒಳ ಹೊರಗಿನ ಎರಡು ವ್ಯಕ್ತಿತ್ವಕ್ಕೆ ಯಾವುದೇ ಧಕ್ಕೆ ಯಾಗದಂತೆ ಚಿತ್ರಿಸಿ ಪ್ರತಿನಾಯಕನನ್ನಾಗಿಸಿ ಗದಾಯುದ್ದ ಕೃತಿಯನ್ನು ರಚಿಸಿ ಅಜರಾಮರನಾಗಿದ್ದಾನೆ.

## ಪರಾಮರ್ಶನ ಕೃತಿಗಳು


1. ಗದಾಯುದ್ದ ದರ್ಪಣಂ - ಪ್ರೊ. ಪಿ ಸುಬ್ರಾಯ್ ಭಟ್, ಪ್ರಕಾಶಕರು - ಲಲಿತ. ವಿಟ್ಲ- 2001.
2. ಕುಮಾರವ್ಯಾಸ ಭಾರತ ಕಥಾಮೃತ - ಎಲ್.ಆರ್ ಭಟ್ಟ. ಶ್ರೀ ಭಗವತ್ಪಾದ ಪ್ರಕಾಶನ, ಶಿರಸಿ – 2007.
3. ಗಣಕ ಸಿರಿ - ಶಿವಾನಂದ ಕೆಳಗಿನಮನಿ, ಕುವೆಂಪು ವಿವಿ ಅಧ್ಯಾಪಕರ ವೇದಿಕೆ. ಶಿವಮೊಗ್ಗ, 2024.
4. ಪಂಪ ಭಾರತ ಕಥಾಲೋಕ-ಆರ್ ಎಲ್ ಅನಂತರಾಮಯ್ಯ - ಸಮಾಜ ಪುಸ್ತಕಾಲಯ, ಧಾರವಾಡ - 1995.
5. ಪಂಪ ಭಾರತ ದೀಪಿಕೆ - ಡಿ.ಎಲ್ ನರಸಿಂಹಾಚಾರ್.... ಡಿವಿಕೆ ಮೂರ್ತಿ ಪ್ರಕಾಶನ ಮೈಸೂರು - 2012.



**Creative Commons (CC) License**

This article is an open access article distributed under the terms and conditions of the Creative Commons Attribution (CC BY 4.0) license. This license permits unrestricted use, distribution, and reproduction in any medium, provided the original author and source are credited.